ಶ್ರೀಮಾನ್ ಜಿ. ಪುಟ್ಟಸ್ವಾಮಿಯವರ ಕಳಕಳಿಗೂ ಯಾವ ವ್ಯತ್ಯಾಸವೂ ಇಲ್ಲದೇ ಇರುವುದರಿಂದ, ಮಾನ್ಯ ಸದಸ್ಯರು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಬಹಳಮಟ್ಟಿಗೆ ವಿವರಣೆ ಯನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯದ ಹಿತದೃಷ್ಟಿಯಿಂದ ಮತ್ತು ಭಾರತದ ಹಿತದೃಷ್ಟಿಯಿಂದ ರೈಲ್ವೆ ಸಂಚಾರ ಸೌಕರ್ಯಗಳು ಜಾಸ್ತಿಯಾಗಬೇಕು. ನಾವು ಯಾವ ವಿಚಾರದಲ್ಲೂ ಹಿಂದೆ ಬಿದ್ದಿಲ್ಲ, ನಮ್ಮ ಪ್ರಭಾವವನ್ನು ಕೇಂದ್ರ ಸರ್ಕಾರದ ಮೇಲೆ ಬೀರಿ, ಇದರ ಕುರಿತು ಎಷ್ಟು ಶ್ರಮ ವಹಿಸ ಬೇಕೋ, ಅದಕ್ಕಿಂತಲೂ ಹೆಚ್ಚು ಶ್ರಮ ವಹಿಸಿದ್ದೇವೆ ಎಂದು ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿ ದ್ದಾರೆ, ಈಗಲೂ ಕೂಡ ಈ ನಿರ್ಣಯದ ತಿರುಳನ್ನು ತಿಳಿದುಕೊಂಡು, ನನ್ನ ಘನ ಉದ್ದೇಶ ಏನು ಇದೆ, ಅದನ್ನು ತಿಳಿದುಕೊಂಡು, ಕೇಂದ್ರ ಸರ್ಕಾರದೊಡನೆ ಪತ್ರ ವ್ಯವಹಾರ ಮಾಡುವುದಾಗಿ ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿರುವುದರಿಂದ, ನಾನು ಈ ನಿರ್ಣಯವನ್ನು ವಾಪಸ್ಸು ಪಡೆಯುತ್ತೇನೆ.

MR. DEPUTY SPEAKER.—Is it the pleasure of the House that the Resplution be withdrawn ?

SRI KAGODU THIMMAPPA.—I press on division.

MR. DEPUTY SPEAKER.—Those in favour of the resolution may please say Aye Those against the motion may please say Nay.

I think the Noes have it, noes havieeit.

The House divided.

The result of divisions is :

Ayes. 8

Noes. 33

The Resolution was negatived and lost re:-amendment of the Constitution to have Cmmitted judiciary in the country

ಶ್ರೀ ಎಸ್. ಎಂ. ಶೀರ್ವಾಳ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಉಪಾಧ್ಯಕ್ಷರೆ, ನಾನು ನಾಲ್ಕನೇ ಸಂಖ್ಯೆಯ ನಿರ್ಣಯವನ್ನು ನದನದ ಮುಂದೆ ಇಡಲಿಕ್ಕೆ ಬಯಸುತ್ತೇನೆ. ನನ್ನ ನಿರ್ಣ ಯವೇನೆಂದರೆ.— ಸಾಮಾಜಿಕ ತರಬೇತಿ ಪಡೆದು ಸಮಾಜವಾದಕ್ಕೆ ಬದ್ಧರಾಗಿದ್ದು ಐದು ವರ್ಷ ಕ್ಕೊಮ್ಮೆ ಚುನಾವಣೆಗೊಳಪಡುವ ನ್ಯಾಯಾಂಗವಿರುವಂತೆ ಸಂವಿಧಾನವನ್ನು ತಿದ್ದುಪಡಿಸಲು ಭಾರತ ಸರ್ಕಾರದವರೊಂದಿಗೆ ವ್ಯವಹರಿಸಬೇಕೆಂದು ಈ ಸಭೆಯವರು ಸರ್ಕಾರದವರಿಗೆ ಶಿಫಾರಸು ಮಾಡುತ್ತಾರೆ.''

ಉಪಾಧ್ಯಕ್ಷರು.— ನಿರ್ಣಯವನ್ನು ಮಂಡಿಸಲಾಗಿದೆ, 'ಸಾಮಾಜಿಕ ತರಬೇತಿ ಪಡೆದು ಸಮಾಜ ವಾದಕ್ಕೆ ಬದ್ಧರಾಗಿದ್ದು ಐದು ವರ್ಷಕೊಮ್ಮೆ ಚುನಾವಣೆಗೊಳಪಡುವ ನ್ಯಾಯಾಂಗವಿರುವಂತೆ ಸಂವಿಧಾನವನ್ನು ತಿದ್ದುಪಡಿಸಲು ಭಾರತ ಸರ್ಕಾರದವರೊಂದಿಗೆ ವ್ಯವಹರಿಸಬೇಕೆಂದು ಈ ಸಭೆ ಯವರು ಸರ್ಕಾರದವರಿಗೆ ಶಿಫಾರಸು ಮಾಡುತ್ತಾರೆ.''

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.— ಈ ಒಂದು ಗೊತ್ತುವಳಿಯನ್ನು ನಾನು ಇಲ್ಲಿ ತರಲಿಕ್ಕೆ ಬಯಸಿದ ಕಾರಣವಾದರೂ ಇಷ್ಟೆ.— ಈ ಒಂದು ಯುಗದಲ್ಲಿ ಸಮಾಜವಾದಿ ಸಿದ್ಧಾಂತವನ್ನು ಹೇಳುವಾಗ, ಕಮಿಟೆಡ್ ಜುಡಿಷಿಯರಿ ಇರಬೇಕೆನ್ನುವುದು ನನ್ನ ನಿಲುವಳಿಯಾದ. ಈ ನ್ಯಾಯಾಂಗಕ್ಕೆ ಭವ್ಯವಾದ ಇತಿಹಾಸವಿದೆ, ಒಂದು ಕಾಲದಲ್ಲಿ "ಮೈಟ್ ಇಸ್ ರೈಟ್" ಎನ್ನುವ ವಾದವಿತ್ತು. ಯಾರು ಬಲವಾಗಿದ್ದರು, ಯಾರು ಸಮರ್ಥರಾಗಿದ್ದರು, ಅವರು ಮಾಡಿದ್ದೆಲ್ಲಾ ಸರ್ವಸಮ್ಮತವಾದ ರಿವಾಜು ಎನ್ನುವ ಸಮಾಜ ಪದ್ಧತಿ ಎರ್ಲಾ ಕಡೆಯೂ ಇತ್ತು. ಕಾಲಾನಂತರ, ಇದು ಮುಂಧನವಾಗಿ, ಪದ್ಧತಿ ಬದಲಾವಣೆಯಾಗಿ. ಯಾರೋ ಒಬ್ಬ ವ್ಯಕ್ತಿ ನ್ಯಾಯ ಕೊಡುವ ರಿವಾಜು ಆಯಿತು. ರಾಜಮಹಾರಾಜರುಗಳು ನ್ಯಾಯವನ್ನು ಕೊಡುವ ಪದ್ಧತಿ ಇದ್ದುದನ್ನು ನಾವು ಇತಿಹಾಸದಲ್ಲಿ ಕೇಳಿದ್ದೇವೆ. ನಮ್ಮ ದೇಶದಲ್ಲಾದರೂ, ಪಂಚಾಯತರು ನ್ಯಾಯ ತೀರ್ಪನ್ನು ಕೊಡುವ ಪದ್ಧತಿ ಇದ್ದುದನ್ನು ಕೇಳಿದ್ದೇವೆ. ಆದರೆ ಅವತ್ತು ಕೊಡುತ್ತಿದ್ದ ನ್ಯಾಯ ಇವತ್ತಿನ ಕಾಲಕ್ಕೆ ಸಮ್ಮತವಾಗುವುದಿಲ್ಲವೆನ್ನುವುದು ಎಲ್ಲರೂ ಒಪ್ಪುತ್ತಾರೆ. ಆ ಕಾಲಕ್ಕೆ ತಕ್ಕಂತೆ ತೀರ್ಪು ನೀಡುವ ನ್ಯಾಯಧರ್ಮ ಆ ದಿನ ಇತ್ತು. ಮನುಧರ್ಮ ಶಾಸ್ತ್ರವನ್ನೇ ನ್ಯಾಯ ನೀಡುವ ಪದ್ಧತಿಯನ್ನಾಗಿ ಇಟ್ಟುಕೊಂಡಿದ್ದ ಸಮಾಜ ಹಿಂದೆ ಇತ್ತು. ಆ ಸಮಾಜದಲ್ಲಿ, ಪ್ರತಿಯೊಂದು ಗ್ರಾಮಾಂತರಗಳಲ್ಲೂ ಇದ್ದ ಪಂಚರು, ಚುನಾಯಿತ ಪ್ರತಿನಿಧಿಗಳಾಗಿರುತ್ತಿದ್ದರು ಎನ್ನುವ ಬಗ್ಗೆ ಅನೇಕ ನಿದರ್ಶನಗಳು ನಮ್ಮಲ್ಲಿ ಇವೆ ಚುನಾಯಿತ ಪ್ರತಿನಿಧಿಗಳಾದ ಪಂಚರು ನ್ಯಾಯ ತೀರ್ಮಾನ ಕೊಡುತ್ತಿದ್ದ ಪದ್ಧತಿಯನ್ನು ನಾವು ನೋಡಿದ್ದೇವೆ ಕೇಳಿದ್ದೇವೆ ಅವತ್ತಿನ ಕಾಲಧರ್ಮಕ್ಕನುಸಾರವಾಗಿ ಅವರು ನ್ಯಾಯವನ್ನು ಕೊಡುತ್ತಿದ್ದರು. ಉದಾಹರಣೆಗೆ ಹೇಳುವುದಾದರೆ, ಆಗಿನ ಕಾಲಕ್ಕೆ ಶೂದ್ರ ವೇದವನ್ನು ಓದಿದರೆ, ಅವೇ ಒಂದು ತಪ್ಪು ಆಗುತ್ತಿತ್ತು. ಆ ತಪ್ಪಿಗೆ ತಕ್ಕ ಶಿಕ್ಷೆಕೊಡುವ ಪದ್ಧತಿಯೂ ಇತ್ತು! ಅವತ್ತಿನ ಕಾಲಧರ್ಮಾನುಗುಣವಾಗಿ ಅಂದಿನ ಪದ್ಧತಿಗನುಸಾರವಾಗಿ ನ್ಯಾಯ ಕೊಡುವ ಪದ್ಧತಿಯಿದ್ದುದನ್ನು ನಾವು ಕಂಡುಕೊಂಡಿದ್ದೇವೆ. ಕಾಲ ಬದಲಾದಂತೆಲ್ಲಾ, ಸಮಾಜ ಪದ್ಧತಿಯಲ್ಲೂ ಬದಲಾವಣೆಗಳಾಗುತ್ತಿವೆ. ಇವತ್ತು ಪ್ರಸಕ್ತ ಇರುವ ಪ್ರಶ್ನೆಯಾದರೂ ಇಷ್ಟೆ:— ಸಾಮಾಜಿಕ ಪದ್ಧತಿಗೂ ನ್ಯಾಯಾಂಗ ವಿಚಾರಧಾರೆಗೂ ಏನಾದರೂ ಸಮತೋಲನವಿದೆಯೇ ? ಸಮತೋಲನವಿಲ್ಲದಿರುವಾಗ ಏನಾದರೂ ಔಷಧಿ ಕೊಡಲೇಬೇಕಲ್ಲವೆ ? ಔಷಧಿ ಕೊಟ್ಟು ಗುಣಪಡಿಸದೆ, ಸಮತೋಲನವಿಲ್ಲದಿರುವ ಪದ್ಧತಿಯನ್ನು ಎಷ್ಟು ದಿವಸ ಮುಂದುವರಿಸುವುದಕ್ಕೆ ಸಾಧ್ಯ ? ಇದು ಎತ್ತು ಏರಿಗೆ ಎಳೆದರೆ, ಕೋಣ ನೀರಿಗೆ ಎಳೆದಂತಾಗುತ್ತದೆ. ಮಾಡಿದ ಎಲ್ಲ ಪ್ರಗತಿಪರ ಶಾಸನಗಳು ಕುಂಠಿತಗೊಳಿಸುವ ನ್ಯಾಯಾಂಗ ಪದ್ಧತಿಯನ್ನು ನಾವು ಕಾಣುತ್ತಿದ್ದೇವೆ. ಇದೇ ಕಾರಣಕ್ಕಾಗಿ ಸುಪ್ರೀಂ ಕೋರ್ಟಿನಲ್ಲಿ ರಾಯ್ ಆವರ ನೇಮಕವಾಯಿತು. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ, ರಾಯ್ ಅಂಥಾ ನ್ಯಾಯ ಮೂರ್ತಿಗಳು ಎಲ್ಲ ಕಡೆ ಇರಬೇಕು ಎಂದು ಯಾರಾದರೂ ವಾದ ಮಾಡಲಿಕ್ಕೆ ಸಾಧ್ಯವಿದೆಯೇ ? ಸಾಧ್ಯವಿಲ್ಲ.

5-30 P M.

ಪ್ರಗತಿಪರವಾದ ವಿಚಾರಧಾರೆಯನ್ನು ಇಟ್ಟುಕೊಂಡಿರತಕ್ಕ ನಮ್ಮ ಸಮಾಜದಲ್ಲಿ ಎಷ್ಟರ ಮಟ್ಟಿಗೆ ಇದು ಬರಲಿಕ್ಕೆ ಸಾಧ್ಯ ಎನ್ನಿಸಬಹುದು ? ಇವತ್ತು ನಮ್ಮ ನ್ಯಾಯಾಂಗ ಕಮಿಟೆಡ್ ಜುಡಿಷಿಯರಿ ಆಗಿಲ್ಲ. ಕಮಿಟೆಡ್ ಜುಡಿಷಿಯರಿ ಆಗಬೇಕು. ಅದಕ್ಕಾಗಿ ದೇಶ ಯಾವರೀತಿಯಲ್ಲಿ ಯೋಜನೆ ಇಟ್ಟುಕೊಂಡಿದೆ, ಸಮಾಜ ಯಾವ ಹಂತದಲ್ಲಿ ಹೋಗುತ್ತಿದೆ ಅದಕ್ಕೆ ಅನುಸಾರವಾಗಿ ನಮ್ಮ ನ್ಯಾಯಾಂಗ ಹೊಂದಿಕೊಂಡು ಹೋಗುತಕ್ಕ ಪದ್ಧತಿಯನ್ನು ಬದಲಾವಣೆ ಮಾಡಬೇಕಾದುದು ನಮ್ಮ ಕರ್ತವ್ಯ ಅಲ್ಲವೇ ? ಇವತ್ತು ಏನಾಗುತ್ತಿದೆ ಎಂದರೆ, ನಾವು ರಾಜ ಮಹಾರಾಜರ ಧನವನ್ನು ಮಾಡಿದಾಗ, ಅವರು ಸುಪ್ರೀಂಕೋರ್ಟಿಗೆ ಹೋಗಿ ಅದಕ್ಕೆ ಸ್ಟೇ ತಂದರು ಇಂಥ ಹಲವಾರು ರೀತಿಯ ನಿದರ್ಶನಗಳು ಇವೆ ಸರ್ಕಾರ ಯಾವುದೇರೀತಿಯ ಕ್ರಾಂತಿಕಾರಕವಾದ ಶಾಸನವನ್ನು ತೆಗೆದುಕೊಂಡು ಬಂದರೂ ಕೂಡ ಅದಕ್ಕೆ ಅಡ್ಡಗಲ್ಲು ಹಾಕತಕ್ಕ ಪ್ರವೃತ್ತಿ ನಮ್ಮ ನ್ಯಾಯಾಂಗದಲ್ಲಿ ಇದೆ. ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದಾಗಲೂ ಕೂಡ ಅದಕ್ಕೆ ತಡೆ ಬಂತು, ವಿಚಾರ ಮಂಥನ ಮಾಡತಕ್ಕ, ಸಮಾಜ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಅನ್ನುವುದನ್ನು ನೋಡತಕ್ಕ ಪ್ರವೃತ್ತಿ ನ್ಯಾಯಾಂಗದಲ್ಲಿ ಇಲ್ಲದೇ ಇದ್ದಾಗ ಇಂಥ ನ್ಯಾಯಾಂಗದಿಂದ ಸಮಾಜದ ವಿಳಿಗೆ ಆಗುತ್ತದೆಯೇ ಎನ್ನುವುದನ್ನು ನಾವು ಇಂದು ವಿಚಾರ ಮಾಡಬೇಕಾಗುತ್ತದೆ. ಪ್ರತಿಯೊಂದು

ಹಂತದಲ್ಲಿಯೂ ಎಡರು ತೊಡರುಗಳನ್ನು ಕೊಡುವುದನ್ನು ದಿನನಿತ್ಯ ನಾವು ನೋಡುತ್ತಿದ್ದೇವೆ. ಇವತ್ತು ಭೂ ಸುಧಾರಣಾ ಶಾಸನವನ್ನು ತಂದರೂ ಅದಕ್ಕೂ ಕೂಡ ಒಂದೊಂದು ರೀತಿಯ ತಡೆ ಕೊಡುವುದನ್ನು ನಾವು ನೋಡುತ್ತಿದ್ದೇವೆ, ಇತ್ತೀಚೆಗೆ ಜನತಾ ನ್ಯಾಯಮಂಡಲಿಗಳು ಸ್ಟೇ ಆರ್ಡರ್ ಕೊಡತಕ್ಕಂಥಾವ್ದನ್ನು, ಇನ್‌ಜಂಕ್ಷನ್ ಕೊಡತಕ್ಕಂಥಾವ್ದನ್ನು ಪ್ರಶ್ನೆ ಮಾಡತಕ್ಕಂಥಾದ್ದನ್ನು ಕೂಡ ಇಂದು ಕಾಣುತ್ತಿದ್ದೇವೆ. ಇದರ ಅರ್ಥ ಏನು? ಇದರ ಅರ್ಥ ಇಷ್ಟೆ; ನ್ಯಾಯಾಂಗದ ಒಂದು ಚಿಂತನೆ ತದ್ವಿರುದ್ಧವಾದ ಚಿಂತನೆಯಾಗಿದೆ ಎನ್ನುವುದು ನಮಗೆ ಗೊತ್ತಾಗುತ್ತಿದೆ. ಯಾವುದೇರೀತಿಯ ಪ್ರಗತಿಪರವಾದ ಶಾಸನವನ್ನೂ ಕೂಡ ಒಪ್ಪತಕ್ಕ ಒಂದು ನೀತಿಯ ನಿಲುಮೆ ನ್ಯಾಯಾಂಗಕ್ಕೆ ಇಲ್ಲ ಎನ್ನುವುದು ನಮಗೆ ಗೊತ್ತಾಗುತ್ತಿದೆ. ಹೀಗಿದ್ದಮೇಲೆ ಇದಕ್ಕೆ ಏನಾದರೂ ಒಂದು ಮಾರ್ಗವನ್ನು ಕಂಡುಹಿಡಿಯಲೇಬೇಕು; ಇವತ್ತು ನಾನು ಇಂಥ ನಿಲುವಳಿಯನ್ನು ಯಾವ ಅಡಿಪಾಯವೂ ಇಲ್ಲದೇ ತರಲಿಲ್ಲ; ಈ ಪದ್ಧತಿ ಜರ್ಮನಿಯಲ್ಲಿ ಇದೆ; ಅಲ್ಲಿ ಅವರು 5 ವರ್ಷಗಳಿಗೂಮ್ಮೆ ಚುನಾವಣೆಗಳ ಮುಖಾಂತರ ನ್ಯಾಯಾಧೀಶರನ್ನು ನೇಮಕ ಮಾಡತಕ್ಕ ಪದ್ಧತಿ ಇಟ್ಟುಕೊಂಡಿದ್ದಾರೆ. ಬಂಡವಾಳಶಾಹಿ ರಾಷ್ಟ್ರವಾದ ಅಮೇರಿಕದಲ್ಲಿ ಇದೆ; ಇದು ಮಾನ್ಯ ಕೃಷ್ಣರವರಿಗೂ ಗೊತ್ತಿದೆ. ಅಲ್ಲಿ ಕೂಡ ಚುನಾಯಿತ ನ್ಯಾಯಾಧೀಶರನ್ನು ನೇಮಕ ಮಾಡತಕ್ಕ ಪದ್ಧತಿ ಇದೆ. ನಾನು ಈ ಮುಂಚೆ ಇನ್ನೊಂದು ನಿಲುವಳಿ ತಂದಿದ್ದೆ; ಚುನಾಯಿತ ಅಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ ಆ ನಿಲುವಳಿ ಬರಲಿಲ್ಲ. ಅಧಿಕಾರಿಗಳನ್ನು 5 ವರ್ಷಗಳಿಗೊಮ್ಮೆ ಕಂಟ್ರಾಕ್ಟ್ ಬೇಸೀಸ್ ಮೇಲೆ ನೇಮಕಮಾಡುವುದು; ಅಧಿಕಾರಿಗಳು ಸರ್ಕಾರದ ನಿಲುಮೆಯ ಬಗ್ಗೆ ಕಳಕಳಿಯನ್ನು ಇಟ್ಟುಕೊಂಡು ಕೆಲಸ ಮಾಡಿದರೆ; ಮುಂದುವರಿಸುವುದು; ಆ ರೀತಿಯ ಕಳಕಳಿ ಇಲ್ಲದೇ ಇದ್ದರೆ 5 ವರ್ಷ ಆದ ಕೂಡಲೇ ಅವರನ್ನು ತೆಗೆದುಹಾಕುವುದು, ಅದು ಬರಲಿಲ್ಲ. ನನ್ನ ವಾದವಾದರೂ ಇಷ್ಟೆ, ಇವತ್ತು ಸರ್ಕಾರ ನಡೆಸತಕ್ಕ ಪಕ್ಷದ ದೃಷ್ಟಿಕೋನ ಒಂದಾಗಿದ್ದು, ಆಡಳಿತ ನಡೆಸತಕ್ಕ ಯಂತ್ರದ ದೃಷ್ಟಿ ಒಂದಾಗಿದ್ದು, ನ್ಯಾಯಾಂಗದ ದೃಷ್ಟಿಕೋನ ಇನ್ನೊಂದಾದರೆ ಯಾವ ರೀತಿಯಲ್ಲಿ ನಾವು ನಮ್ಮ ಕಾರ್ಯಕ್ರಮಗಳನ್ನು ಸಫಲಮಾಡುವುದಕ್ಕೆ ಆಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆ ? ಯಾವುದಾದರೂ ಕರಾರುಪತ್ರಗಳನ್ನು ಸ್ವಲ್ಪ ತದ್ವಿರುದ್ಧವಾಗಿ ತೆಗೆದುಕೊಂಡು ಕನಿಷ್ಠಪಕ್ಷ 20 ದಿವಸ ಟೇಬಲ್ ಕಳಗೆ ಇಟ್ಟುಕೊಂಡರೆ ಸಾಕು; ಡಿಲೆ ಆದಷ್ಟೂ ಅನುಕೂಲವಾಗುತ್ತದೆ, ನಾನೂ 100ಕ್ಕೆ 100 ಜನ ಇಂಥವರು ಇದ್ದಾರೆ ಎಂದು ಹೇಳುವುದಕ್ಕೆ ತಯಾರಿಲ್ಲ, 100ಕ್ಕೆ 75 ಭಾಗ ಇರಬಹುದು, 25 ಭಾಗ ಇರಬಹುದುಹಾಗಲಿಗೆ ಒಂದು ಹನಿ ಹುಳಿ ಬಿದ್ದರೂ ಕಲುಷಿತವಾದ ಹಾಗೆ ಒಬ್ಬಿಬ್ಬರು ಇದ್ದು ಅವರ ''ಕ್ಯಾನ್ಸರ್''ನ ಪರಿಣಾಮ ಬೇರೆಯವರ ಮೇಲೂ ಆಗದೇ ಇರಲಿಕ್ಕಿಲ್ಲ. ನಾವು ಈಗಾಗಲೇ ಪ್ರತಿದಿನವೂ ಕೂಡ ಇಂಥ ತೊಂದರೆಗಳನ್ನು ಅನುಭವಿಸುತ್ತಿದ್ದೇವೆ.ಇದಕ್ಕಾಗಿ ನಾನು ಹೇಳುವುದು ಇಷ್ಟೆ,ಇವತ್ತು ಯಾವುದೋ ಸಿದ್ಧಾಂತವನ್ನು ಇಟ್ಟುಕೊಂಡು ಒಂದು ಮಜಲು ಮುಟ್ಟುವುದಕ್ಕೆ ಹೊರಟಿದ್ದೇವೆ, ಮಜಲನ್ನು ಮುಟ್ಟಲೇಬೇಕು, ಆ ಸಿದ್ಧಾಂತದಂತೆ ಮಜಲನ್ನು ಮುಟ್ಟಲು ಎದುರಾಗುವುದನ್ನೆಲ್ಲಾ ನಿರ್ನಾಮ ಮಾಡತಕ್ಕ ಪ್ರವೃತ್ತಿ ಇಲ್ಲದೇ ಹೋದರೆ ತುಂಬಾ ಕಷ್ಟವಾಗುತ್ತದೆ. ಹಾವು ಸಾಯಲೂ ಬಾರದು, ಕೋಲು ಮುರಿಯಲೂ ಬಾರದು ಎನ್ನುವ ಗಾದೆಯಂತೆ ಆಗುತ್ತದೆ. ನಾವು ಮತ್ತೆ ಚುನಾವಣೆಗೆ ಹೋದ ಕೂಡಲೆ ಕೋರ್ಟ್‌ನವರಿಗೆ ಬುದ್ಧಿ ಬರುವುದರಿಂದ ಬಿಳಂಬವಾಯಿತು ನಮಗೆ ಬಹಳ ಕಳಕಳಿ ಇದೆ ಎಂದು ಹೇಳುವುದಕ್ಕೆ ಬದಲು ಇವತ್ತು ಇದನ್ನೇ ಪಕ್ಕಕ್ಕೆ ಬುಡವೇಲು ಮಾಡಬಾರದು ? ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಒಂದೇ ಪಕ್ಷದ ಸರ್ಕಾರ ಇದೆ, ನಮ್ಮ ಸಿದ್ಧಾಂತವನ್ನು ಒಪ್ಪಿಕೊಳ್ಳತಕ್ಕ ಸರ್ಕಾರ ಇದೆ ಇಂಥ ಅವಕಾಶ ಇದ್ದಾಗ ನ್ಯಾಯಾಂಗ ಮತ್ತು ಆಡಳಿತಾಂಗವನ್ನು ಅಮೂರಾಗ್ರವಾಗಿ ಬದಲಾವಣೆ ಪಕ್ಕಕ್ಕೆ ಮಾಡಬಾರದು ? ಪಾಲಸಿ ಮೇಕರ್ಸ್ ಬಾಡಿಯಾಗಿ ಜನತೆಯ ಮುಂದೆ ಈ ಸಿದ್ಧಾಂತವನ್ನು ಇಟ್ಟು, ಜನತೆಯಿಂದ ಮತವನ್ನು ಪಡೆದು ನಾವು ಉದ್ಯುಕ್ತರಾಗಿದ್ದೇವೆ, ನಮಗೆ ಕೊಟ್ಟಿರತಕ್ಕ ಅವಕಾಶ ಎಷ್ಟು 5 ವರ್ಷ, ಈ ಐದು ವರ್ಷದಲ್ಲಿ ಹೇಳತಕ್ಕಂಥಾ ಮ್ಯಾನಿಫೆಸ್ಟೋವನ್ನು ಕಾರ್ಯಗತ ಮಾಡಿ ತೋರಿಸಬೇಕು. ಮುಖ್ಯಮಂತ್ರಿಗಳು, ಮಂತ್ರಿಗಳು ಎಲ್ಲವನ್ನು ಮಾಡುವುದಕ್ಕಾಗುವುದಿಲ್ಲ. ನಾವು ತ್ರೂ ಪ್ರಾಪರ್ ಚಾನಲ್ ಎಂದು ಕರೆಯುತ್ತೇವೆ, ಇದು ಬ್ಯುರೀಷನವರು ಹೇಳಿಕೊಟ್ಟಿರತಕ್ಕ ಪದ್ಧತಿ ಈ ರೋಗ ಹೋಗಬೇಕು. ನಮ್ಮ ಸಿದ್ಧಾಂತ ಏನು ಕೆಲಸ ಆಗಬೇಕು, ಇದಕ್ಕೆ ಯಾವುದು ಅಡ್ಡಿ ಆಡಚಣೆ ಇವೆ, ತೊಡಕುಗಳು ಇವೆ, ಅವುಗಳನ್ನು ಕಡಿದುಹಾಕತಕ್ಕ, ಮೂಲೋತ್ಪಾಟನೆ ಮಾಡತಕ್ಕ ಪ್ರವೃತ್ತಿಯನ್ನು ನಾವು ಬೆಳೆಸಿಕೊಳ್ಳದೇ

ಹೋದರೆ, ಜನ ನಮ್ಮ ಬಗ್ಗೆ ನಂಶಯ ಪಡುತ್ತಾರೋ ಏನೋ ಎನ್ನುವ ಕಳಕಳಿ ನನಗೆ ಇದೆ. ನಮ್ಮ ಹತ್ತಿರ ಹಣ್ಣು ಕತ್ತಿ ಕೊಟ್ಟೂರೂ, ಅಪೇಕ್ಷಿತ ಹಿವಾಚಲಪರ್ಯಂತ ಒಂದೇ ಮನಸ್ಸಿನಿಂದ ಬೆಂಬಲ ಕೊಡುವಾಗ ನಮ್ಮ ಆ ಸಿದ್ಧಾಂತವನ್ನು ಸಂಪೂರ್ಣವಾಗಿ ಆಚರಣೆಗೆ ತರಲಿಕ್ಕೆ ಏನೇನು ಆಗಬೇಕೋ ಅಷ್ಟನ್ನು ಮಾಡಬೇಕಾದದು ನಮ್ಮ ಕರ್ತವ್ಯ. ಅದು ಏನೇ ಆಗಲೀ, ಎಷ್ಟೇ ತೊಂದರೆ ಬರಲಿ ಅದನ್ನು ಮಾಡಲೇಬೇಕು, ನಾವು ಅದನ್ನು ಮಾಡದೇ ಹೋದರೆ ಜನ ನಮ್ಮ ನಿಷ್ಠೆಯ ಬಗ್ಗೆ ನಂಶಯ ಪಟ್ಟಾರೋ ಏನೋ ಎನ್ನುವುದೇ ನನ್ನ ವಾದ. ಸ್ವಾಮಿ, ಇವತ್ತು ಇರ ತಕ್ಕಂಥ ಜನಜನಿತವಾದಂಥ ಮಾತು ಎಂದರೆ ಟ್ರಿಬ್ಯುನಲ್‌ನಲ್ಲಿ ನಾವು ಕುಳಿತುಕೊಂಡು ರೈತ ಮಾಡಿರತಕ್ಕಂಥ ಜಮೀನಿಗೆ ಮಾಲೀಕ ತಕರಾರು ಮಾಡಿದಾಗ ಆ ಜಮೀನಿಗೆ ಇಂಜಕ್ಷನ್ ಕೊಡುವುದು. ಅದನ್ನು ಕೊಟ್ಟ ಎರಡೇ ದಿವಸದಲ್ಲಿ ಭೂಮಾಲೀಕ ಹೈಕೋರ್ಟಿನಿಂದ ಸ್ಟೇ ಆರ್ಡರ್ ತಂದು ಆ ಅಧಿಕಾರವನ್ನು ಉಪಯೋಗಿಸಿಕೊಂಡು ಬೆಳೆದಿರುವ ಬೆಳೆಯನ್ನೆಲ್ಲಾ ಕಟಾವು ಮಾಡಿಕೊಂಡು ತಂದು ತನ್ನ ಮನೆಗೆ ಹಾಕಿಕೊಳ್ಳುತ್ತಾರೆ. ಇವತ್ತು ಈ ರೀತಿಯಾದ ಒಂದು ವರ್ಗಕಲಹ ಇರುವುದನ್ನು ನಾವು ನೋಡುತ್ತಿದ್ದೇವೆ. ಈ ರೀತಿಯ ವರ್ಗಕಲಹದಲ್ಲಿ ಉಳ್ಳವರ ವರ್ಗಕ್ಕೆ ಎಂದರೆ ಶ್ರೀಮಂತರ ವರ್ಗಕ್ಕೆ ಪ್ರಭಾವಯುತವಾಗಿ ಬೆಂಬಲ ಸಿಕ್ಕುತ್ತದೆ. ಇದಕ್ಕೆ ನಾನು ಬೆಂಬಲ ಕೊಡದೇ ಇರುವುದು, ಅಥವಾ ರಾಜ್ಯದ ಮಾನ್ಯ ಮಂತ್ರಿಗಳ ಬೆಂಬಲ ಕೊಡದೇ ಇರಬಹುದು. ಈ ನೌಕರ ವರ್ಗದಲ್ಲಿ ಅವರು ಬೀರುವಷ್ಟು ಪ್ರಭಾವವನ್ನು ಯಾವ ಸಾಮಾನ್ಯ ರೈತರೂ ಬೀರಲಾರರು. ದೊಡ್ಡ ದೊಡ್ಡ ಅಧಿಕಾರಗಳನ್ನು ಮಾತನಾಡಿಸುವ ಅಧಿಕಾರ, ಧೈರ್ಯ ಈ ಸಣ್ಣಪುಟ್ಟ ಬಡ ರೈತರಿಗೆ ಇರುವುದಿಲ್ಲ. ಶ್ರೀಮಂತ ಹೈಕೋರ್ಟಿನಿಂದ ಸ್ಟೇ ಆರ್ಡರ್ ತೆಗೆದುಕೊಂಡು ಬಂದ ಅಂದರೆ ಟ್ರೈಬ್ಯುನಲ್‌ನಲ್ಲಿ ಇಂಜಂಕ್ಷನ್ ಕೊಟ್ಟಿದ್ದರೂ ಕೂಡ ಆದನ್ನ ಈ ಅಧಿಕಾರ ವರ್ಗದವರು ಕಾರ್ಯರೂಪಕ್ಕೆ ತರದೇ ಹಾಗೆಯೇ ಇಟ್ಟುಕೊಂಡು ಕಾಲಹರಣ ಮಾಡುತ್ತಾರೆ. ಅಧಿಕಾರಿಗಳು ಈ ಬಡ ರೈತರಿಗೆ ಏನೇನೂ ಸಹಾಯವನ್ನು ಮಾಡುತ್ತಿಲ್ಲ. ಆಗ ಬಡ ರೈತ ತನಗೆ ಈ ರೀತಿ ಒಂದು ಅನ್ಯಾಯವಾಗಿದೆ ಇದಕ್ಕೆ ತಾವು ರಕ್ಷಣೆಯನ್ನು ಕೊಡಬೇಕು, ನನಗೆ ಟ್ರಿಬ್ಯುನಲ್‌ನವರು ಇಂಜಂಕ್ಷನ್ ಕೊಟ್ಟಿದ್ದಾರೆ ಎಂದು ಅದನ್ನು ಪೋಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋದರೆ ಅವರು ಏನು ಹೇಳುತ್ತಾರೆ ಎಂದರೆ, ಟ್ರಿಬ್ಯುನಲ್‌ನವರು ಇಂಜಂಕ್ಷನ್ ಕೊಟ್ಟರು ನೀವು ತೆಗೆದು ಕೋಡು ಬಂದಿರಿ. ಆದರೆ ಇದನ್ನು ತೀರ್ಮಾನ ಮಾಡುವ ಹಕ್ಕು ಹೈಕೋರ್ಟ್‌ಗೆ ಇದೆ. ಈ ಟ್ರೈಬ್ಯುನಲ್‌ನವರು ಕೊಟ್ಟಿರುವ ಇಂಜಂಕ್ಷನ್‌ಗೆ ಏನಾದರೂ ಬೆಲೆ ಇದೆಯೆ ? ಇದು ಪ್ರಯೋಜನವಿಲ್ಲ ಎಂದು ಹೇಳುತ್ತಾರೆ. ಇಂಥಾದ್ದು ಒಂದು ಕೇಸ್ ನನ್ನ ಗಮನಕ್ಕೆ ಬಂದಾಗ ನಾನು ಅವರನ್ನು ಕರೆದು ಉಗಿದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಇವತ್ತು ಒಬ್ಬ ಸಣ್ಣ ಬಡ ರೈತ ನ್ಯಾಯ ಕೇಳುವುದಕ್ಕೆ ಹೋದಾಗ ಅವನನ್ನು ಗದರಾಚೆ ಮಾಡಿ ಕಳುಹಿಸುತ್ತಾರೆ. ಅದೇ ದೊಡ್ಡವರು ಅಂದರೆ ಶ್ರೀಮಂತರು ಕಾರ್ ಹಾಕಿಕೊಂಡು ಹೋಗಿ ಪೋಲೀಸ್ ಸ್ಟೇಷನ್ ಮುಂದೆ ನಿಂತಕೂಡಲೇ ಅಧಿಕಾರಿಗಳು ಇವರನ್ನು ಒಳಕ್ಕೆ ಕರೆದುಕೊಂಡು ಹೋಗಿ ಕುಳ್ಳಿರಿಸಿಕೊಂಡು ಮಾತನಾಡಿ ಕಳುಹಿಸುತ್ತಾರೆ. ಆಗ ಈ ಜಮೀನಿನ ಮೇಲೆ ಎಂತಹ ಇಂಜಂಕ್ಷನ್ ಇದ್ದರೂ ಕೂಡ ಅದು ಹೊರಟುಹೋಗುತ್ತದೆ. ಇದರ ಜೊತೆಗೆ ಹೈಕೋರ್ಟ್‌ನವರೂ ಕೂಡ ಇವರ ಕಡೆಗೇ ಶಾಮೀಲು ಆದರೆ ಯಾರೂ ಏನು ಮಾಡುವುದಕ್ಕಾಗುವುದಿಲ್ಲ. ಆಮೇಲೆ ನಾವು ಕ್ರಾಂತಿಕಾರವಾದ ಸಾಧನೆಗಳನ್ನು ಏನಾದರೂ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ? ಇದನ್ನು ತಾವು ಯೋಚನೆ ಮಾಡಬೇಕು. ಇವತ್ತಿನ ದಿವಸ ನಾವು ಮಲಗಿದ್ದ ಸಮಾಜವನ್ನು ತಟ್ಟಿ ಎಚ್ಚರಿಸಿದ್ದೇವೆ. ಅವರಿಗೆ ತಿಳಿವಳಿಕೆಯನ್ನು ಕೊಟ್ಟಿದ್ದೇವೆ. ಇದುವರೆಗೂ ಈ ಹೆಬ್ಬಾವು ಸಮ್ಮನೆ ಮಲಗಿತ್ತು ಅದಕ್ಕೆ ಓಡಾಡುವುದಕ್ಕೆ ಆಗುತ್ತಾ ಇರಲಿಲ್ಲ. ಆಹಾರವನ್ನು ಹಾಕಿದರೆ ತಿನ್ನುತ್ತಿತ್ತು ಇಲ್ಲದಿದ್ದರೆ ಸುಮ್ಮನೆ ಮಲಗಿಕೊಂಡಿರುತಿತ್ತು. ಇದುವರೆಗೂ ಈ ಸಮಾಜ ಚೇತನವಿಲ್ಲದೆ ಮಲಗಿತ್ತು. ಇಂಥ ಸಮಾಜಕ್ಕೆ ನಾವು ಹೋರಾಟ ಮಾಡುವ ಚಿಂತನೆ ಮಾಡುವ ಒಂದು ಶಕ್ತಿಯನ್ನು ನಾವು ತುಂಬಿದ್ದೇವೆ. ಇಂಥ ಒಂದು ಸನ್ನಿವೇಶದಲ್ಲಿ ಅವರ ಭಾವನೆಯನ್ನು ಬೆಳೆಸುವ ಒಂದು ಕಾರ್ಯವನ್ನು ನಾವು ಮಾಡದಿದ್ದರೆ ಇದರ ಪರಿಣಾಮ ಏನಾಗಬಹುದೆಂಬುದನ್ನು ಯೋಚನೆ ಮಾಡಿದರೆ ನನ್ನ ಮೈ ನಡುಗುತ್ತದೆ. ಮಲಗಿದ್ದವರನ್ನು ಹಾಗೆಯೇ ಮಲಗಿಕೊಳ್ಳಲಿ ಎಂದು ನಾವು ಬಿಟ್ಟಿದ್ದರೆ ನಮಗೆ ಯೋಚನೆ ಇರಲಿಲ್ಲ. ಆದರೆ ಇವತ್ತು ಅವನನ್ನು ಎಚ್ಚರಿಸಿ ಅವನಿಗೆ ಕಾನೂನಿನ ಅರಿವನ್ನು ಮಾಡಿಕೊಟ್ಟಿದ್ದೇವೆ. ಅವನನ್ನು

ಎತ್ತಿಕಟ್ಟಿ ನಿಲ್ಲಿಸಿ ಅವನ ಬಯಕೆಗಳನ್ನು ನಾವು ಈಡೇರಿಸದೇ ಹೊದ ಪಕ್ಷದಲ್ಲಿ ಆದರ ಪರಿಣಾಮ ನಮ್ಮಂತಹ ರಾಜಕೀಯ ಮುಖಂಡರಿಗೆ ತಪ್ಪಿದಲ್ಲ. ಈ ಒಂದು ಉದ್ದೇಶದಿಂದ ಈ ನಿರ್ಣಯವನ್ನು ತಗೆದುಕೊಂಡು ಬಂದಿದೆ. ಅವತ್ತು ನಾವು ನಿಮಗೆ ಸಮಾಜವಾದದ ಸಿದ್ಧಾಂತವನ್ನು ನಿಮ್ಮ ಮನೆಯ ಬಾಗಿಲಗೇ ತಂದು ಕೊಡುತ್ತೇವೆ ಎಂದು ಹೇಳಿದ್ದೆವು. ಸ್ವಾಮಿ, ನಾನು ಒಂದು ಮಾತನ್ನು ಹೇಳುತ್ತೇನೆ. ಅವರು ತಮ್ಮ ಓಟನ್ನು ಕೊಟ್ಟಿದ್ದಾರೆಯೆ ಅತಕ್ಕೆ ಎಂದರೆ. ಏನೋ ಈ ವಿರೋಧ ಪಕ್ಷದವರು ಸಮಾಜವಾದವನ್ನು ನಮ್ಮ ಮನೆಯ ಬಾಗಿಲಗೆ ತಂದುಕೊಡುತ್ತೇವೆಂದು ಬಾಯಲ್ಲಿ ಹೇಳುತ್ತಿದ್ದಾರೆ ಓಟನ್ನು ಕೊಟ್ಟು ನೋಡೋಣ, ಅವರಿಂದ ನಮ್ಮ ಆಸೆ ಆಕಾಂಕ್ಷೆಗಳು ಈಡೇರಬಹುದು ಎನ್ನುವ ಒಂದು ನಿರ್ದಾಪನೆಯಿಂದ ನಮಗೆ ಮತವನ್ನು ಕೊಟ್ಟಿದ್ದಾರೆ. ಇವತ್ತು ನಾವು ಅದನ್ನು ಈಡೇರಿಸದಿದ್ದರೆ ನಮಗೆ ಈ ಇಹಲೋಕದಲ್ಲಿ ಕಷ್ಟ ತಪ್ಪಿದ್ದಲ್ಲ. ಅಲ್ಲದೆ ಪರಲೋಕದಲ್ಲಿಯೂ ಕೂಡ ನಮಗೆ ಕಷ್ಟ ತಪ್ಪಿದ್ದಲ್ಲ ಎನ್ನುವ ಮಾತನ್ನು ಈ ಸಂರ್ಭದಲ್ಲಿ ಹೇಳುತ್ತೇನೆ. ಇವತ್ತು ಅವನ ಬಯಕೆಗಳನ್ನು ಈಡೇರಿಸದಿದ್ದರೆ ನಾವು ಉಳಿಯುವಂತಿಲ್ಲ. ಇಲ್ಲವೇ ನ್ಯಾಯೋಂಗವೇ ಇಲ್ಲ ಎಂದು ನೀವು ತೀರ್ಮಾನ ಮಾಡುವುದಾದರೆ ಅದಕ್ಕೆ ನಾನು ಮೊದಲಯವನು ಡೆಮೊಕ್ರೆಟಿಕ್, ಸೋಷಿಯಲಿಸ್ಟಿಕ್ ಸೆಟಪ್‌ನಲ್ಲಿ ಈ ಜುಡಿಷಿಯರಿ ಅನಾವಶ್ಯಕ ಎನ್ನುವುದು ನನ್ನ ವಾದ.

(ನಗು)

ಸ್ವಾಮಿ, ತಾವು ನಗಬೇಡಿ. I have got every right to say. ಈ ಕಾನ್‌ಸೆಪ್ಟ್ ಆಫ್ ಪ್ರಾಪರ್ಟಿ ಎನ್ನುವುದು ಎಲ್ಲಯವರೆಗೆ ಇರುತ್ತದೋ ಅಲ್ಲಿಯವರೆಗೂ ಈ ತೊಂದರೆಗಳು ಇರುತ್ತವೆ.

SRI H. T. KRISHNAPPA.— So the man becomes divine is it? As soon as you remove the concept of property man becomes divine and does not commit any crime, according to you. ಈ ಕಾನ್‌ಸೆಪ್ಟ್ ಆಫ್ ಪ್ರಾಪರ್ಟಿ ಎನ್ನುವುದು ಇರಕೂಡದು ಎಂದು ನಾವು ವಾದಮಾಡುವವರಲ್ಲ, ಇರಬೇಕೆಂದೂ ವಾದ ಮಾಡುವವರಲ್ಲ. ನೀವು ಏನು ಹೇಳುತ್ತೀರಿ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಿಮ್ಮ ಪಾರ್ಟಿಯವರೂ ಕೂಡ ಈ ಪ್ರಾಪರ್ಟಿಯನ್ನು ಬಿಟ್ಟೇ ಬಿಡಿ ಎರದು ಹೇಳುವುದಿಲ್ಲ. ಆದರೆ ಅದಕ್ಕೆ ಒಂದು ಮಿತಿ ಇರಬೇಕೆಂದು ಹೇಳುತ್ತಾರೆ ಬೇಕಾದರೆ ತಮ್ಮ ಪಾರ್ಟಿಯವರನ್ನೇ ಕೇಳಿ. ಅಸ್ತಿ ಹಕ್ಕು ಹೋದ ಕೂಡಲೇ ದೈವತ್ವ ಬಂದುಬಿಡುತ್ತದೆಯೇ?

Mr. DEPUTY SPEAKER.— Under the Indian Penal Code there are two categories of offences; One is against the persons and another is against the property. Offences against persons is given priority. Do you agree?

ಶ್ರೀ ಎಸ್. ಎಂ. ಶಿರ್ಸಾಳಿ ಚಂದ್ರಶೇಖರ್.— ನಾನು ಹೇಳಿದ ಅಭಿಪ್ರಾಯವನ್ನು ಸಂಪೂರ್ಣ ಮಾಡುವಷ್ಟರಲ್ಲಯೇ ಅವರು ಎದ್ದು ನಿಂತರು. ನಾನು ಹೇಳುವುದು ಏನೆಂದರೆ individual's interest is given more predomirance that Society's interest. There should be collective interest. The present set up of judiciary is safeguarding the interest of individuls and not the interests of society. Such type of judiciary must be abolished. That is my intention. I hope I have made mys-lf clear ಬ್ರಿಟಿಷರು ನಮ್ಮ ದೇಶಕ್ಕೆ ಬಂದಾಗ ತಮ್ಮ ಹಿತವನ್ನು ಸಾಧಿಸಿ ಕೊಳ್ಳುವುದಕ್ಕೋಸ್ಕರ ಇಲ್ಲಿನ ವೆಸ್ಟೆಡ್ ಇಂಟರೆಸ್ಟ್ಸ್ ಯಾರಿದ್ದರು ಅವರನ್ನು ತಮ್ಮ ಹಿಡಿತದಲ್ಲೆ ಇಟ್ಟುಕೊಂಡರೆ ದೇಶವನ್ನು ಆಳಬಹುದು ಎಂದು ಒಂದು ಉದ್ದೇಶವನ್ನು ಇಟ್ಟುಕೊಂಡಿದ್ದರು.

ಬ್ರಿಟೀಷರ ಕಾಲದಲ್ಲಿ ಇದ್ದವರು, ಉತ್ತಮ ಜನರುಗಳು, ವಿಚಾರವಂತರು, ಅಸ್ತಿವಂತರು, ರಾಜಮಹಾರಾಜರುಗಳು, ಅವರನ್ನು ಹೊಂದಿಕೊಂಡು ದೇಶವನ್ನು ಆಳುತ್ತಾ ಬಂದರು. ಅದೇ ಬೇಸಿಸ್‌ಮೇಲೆ ನ್ಯಾಯಾಂಗವನ್ನು ಸೃಷ್ಟಿಮಾಡಿ ಅಧಿಕಾರಿಗಳಿಗೆ ಹಕ್ಕುಬಾದ್ಯತೆಗಳನ್ನು, ನ್ಯಾಯಾಂಗವನ್ನು ಕೊಟ್ಟು ಹೋದರು ಇದು ಬ್ರಿಟೀಷರು ಕೊಟ್ಟಿರುವ ಒಂದು ಶಾಪ ಎಂದು ಹೇಳದೆ ಗತ್ಯಂತರವಿಲ್ಲ. ಈವತ್ತು ಹಾಗಾದರೆ ನಾವು are we a Static Society? We are not a static Society 5 ಸಾವಿರದ ವರ್ಷಗಳ ಜನರನ್ನು ತೆಗದುಕೊಂಡರೂ, ನಮ್ಮ ರಾಷ್ಟ್ರದಲ್ಲಿ ಆಗಿತಕ್ಕ ಬದಲಾವಣೆ ಯಾವ ರಾಷ್ಟ್ರದಲ್ಲೂ ಆಗಿಲ್ಲ. ನನ್ನ ವಾದವನ್ನು, ಪುಷ್ಟೀಕರಿಸುವುದಕ್ಕೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಹೀಗೆ ನಾವು ಸಮಾಜವನ್ನು, ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದೇವೆ. ಕಾಲಕಾಲಕ್ಕೆ ಹೊಂದಿಕೊಂಡು ಬಂದಿರುವುದರಿಂದ ಬ್ರಿಟೀಷರು ಕೊಟ್ಟಿರತಕ್ಕ ಶಾಪಗ್ರಸ್ಥ ನ್ಯಾಯಾಂಗವನ್ನು ಉಳಿಸಿಕೊಂಡು ಬರಬೇಕಾಗಿದೆಯೇ ಬೇಡವೇ ಎನ್ನುವುದನ್ನು ವಿಚಾರಮಾಡಿ ನಿರ್ಧರಿಸುವ ಕಾಲ ಸನ್ನಿಹಿತವಾಗಿದೆ. Whether we should continue the present system of the Judiciary or not? This is the Question.

ಈಗಿರತಕ್ಕಂಥ ನ್ಯಾಯಾಂಗವನ್ನು ಮುಂದುವರಿಸಬೇಕೆಂದರೆ ನಮ್ಮ ಎಲ್ಲ ಸಿದ್ಧಾಂಥಕ್ಕೆ ತಿರಾಂಜಲಯನ್ನು ಕೊಡಬೇಕೆನ್ನುವುದು ನಿರ್ವಿವಾದವಾದ ಮಾತು ಪ್ರತಿಯೊಂದು ಹಂತದಲ್ಲೂ ಕೂಡ ತಾವು ಕಾನ್ಸ್‌ಸ್ಟಿಟ್ಯೂಶನ್ ತೆಗೆದು ನೋಡಿದರೆ Whether the present set up of Judiciary shall continue? Shall we change it or shall we abolish it? ಎಂದು ವಿಚಾರ ಮಾಡಿದರೆ If we change it, it is well and good. If we cannot change it, then you have to abolish it. There is no other way, when we cannot cope up with the present set of Judiciary it is highly impossible to bring it in to present what we preach That is my whole intention ಈವತ್ತು ಬಂಡವಾಳ ಶಾಹಿ ರಾಷ್ಟ್ರಗಳು ಎಂದು ಹೇಳಿದರೂ ಕೂಡ ಕೆಲವು ಪ್ರಗತಿಪರವಾದ ವಿಚಾರಗಳನ್ನು ಇಟ್ಟು ಕೊಂಡಿರುತ್ತಾರೆ. ಅಧಿಕಾರದಲ್ಲಿರತಕ್ಕಂಥವರು ಕೇಳಕ್ಕೆ ಇಳಿಯಲೇ ಬೇಕು ಚುನಾವಣೆಗೆ ನಿಲ್ಲಲೇಬೇಕು. ಚುನಾವಣೆಗೆ ನಿಲ್ಲಬೇಕಾದರೆ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕು. ನಡೆದುಕೊಳ್ಳದೇ ಹೋದರೆ ಕೇಳುವ ಜನರು ಇರುತ್ತಾರೆ. ಆದ್ದರಿಂದ ಜನರ ಮೆಚ್ಚುಗೆಗೆ ಪಾತ್ರರಾಗಿ ವರ್ತಿಸಬೇಕು. ಚುನಾವಣೆಗಳನ್ನು ಇಡುವುದರಿಂದ ಅದು ಯಾವತ್ತೂ ಕೂಡ ಒಳ್ಳೆಯದು, ಡಿಕ್ಟೇರ್ ಆಗುವವರೆಗೂ ನನ್ನ ಹಕ್ಕು ಎಂದು ತಿಳಿದುಕೊಳ್ಳತಕ್ಕ ಸ್ವಭಾವವಿರುವುದಿಲ. ಜನರ ಮೆಚ್ಚುಗೆ ಮತ್ತು ಜನರ ಹಿತಕ್ಕಾಗಿ ಕೆಲಸ ಮಾಡತಕ್ಕ ಪ್ರವೃತ್ತಿ ಬೆಳೆಸಿಕೊಂಡು ಬರಲು ಸಾಧ್ಯವಾಗುತ್ತದೆ. ಮಾನ್ಯ ಮಂತ್ರಿಗಳಿಗೆ ಹೇಳಿದ ಸಾಮಾನ್ಯ ಡೈರೆಕ್ಟರ್ ನನ್ನ ಹತ್ತಿರ ಬಂದು ಹೇಳತ್ತಾನೆ. ಮಂತ್ರಿಗಳು ಈವತ್ತು ಬರುತ್ತಾರೆ. ನಾಳೆ ಹೊಗುತ್ತಾರೆ. ಆದರೆ ನಾಳೆ ನಮ್ಮನ್ನು ಕೇಳುತ್ತಾರೆ. ನಾವು ಇಲ್ಲಿ 20 ವರ್ಷಗಳ ಕಾಲ ಇರುವವರು ಎಂದು ಇದು ಏತಕ್ಕೆ ಬಂದಿದೆ?. ಈವತ್ತು ಈ ಸರ್ಕಾರವಿರುತ್ತದೆ. ನಾಳೆ ಮತ್ತೊಂದು ಸರ್ಕಾರ ಬರುತ್ತದೆ. ನನ್ನ ಖಾಯಂ ಗುತ್ತೇದಾರಿ ಎನ್ನುವ ಭಾವನೆ ಎಲ್ಲಯವರೆಗೆ ಇರುತ್ತದೆ ಅಲ್ಲಯವರೆಗೂ ಕೂಡ ಕೆಲಸ ಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ಆಗುವುದಿಲ್ಲ. ಕೆಲಸ ಸ್ಥಗಿತವಾಗುತ್ತದೆ.

Mr Deputy Speaker —The Hon'ble Member may resume his seat. I call upon another Hon'ble Member to speak.

6-00 P.M.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).— ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಶೀರಾಳಿ ಚಂದ್ರಶೇಖರ್ ಅವರು ಮಂಡಿಸಿರುವ ನಿರ್ಣಯವನ್ನು ನಾನು ಬೆಂಬಲಿಸುತ್ತಾ ಕೆಲವು ಮಾತುಗಳನ್ನು ಹೇಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಅಧ್ಯಕ್ಷರೆ, ಮಾನ್ಯ ಎಂ. ಎಸ್. ಕೃಷ್ಣನ್ ಅವರು ಬೆಂಬಲಿಸುತ್ತಿದ್ದಾರೆ, ನಮ್ಮ ನಿಲುವು ವಿರೋಧಿಸುವುದು. ಆದ್ದರಿಂದ ನಮಗೆಲ್ಲರಿಗೂ ಅವಕಾಶ ಸಿಗಬೇಕು.

Sri S. M. KRISHNA (Minister for Industries and Parliamentary Affairs.— Sir the Government sometimes is left in a predicament. I understand and appreciate the anxiety on the part of members who would like to participate on this Resolution. Sriyuths M. S Krishnan, Kagodu Thimmappa and H T Krishnappa are members of the Business Advisory Committee and they know the time allotted for this Resolution. However, I will not stand in the way if you want to take it up tomorrow subject to the condition that the list of Resolutions which has been approved by the Business Advisory Committee for tomorrow are also taken up. If it is the consensus of the House that it will be taken up tomorrow, I certainly will not come in the way.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೆ, ಇವತ್ತಿನ ಪರಿಸ್ಥಿತಿಯಲ್ಲಿ ಇದು ಅತೀ ಮುಖ್ಯವಾದ ನಿರ್ಣಯ ಎಂದು ಒತ್ತಿ ಹೇಳಬೇಕಾಗಿದೆ. ತಮಗೆಲ್ಲಾ ಗೊತ್ತಿರುವ ಹಾಗೆ ಈ ನಿರ್ಣಯ ಸ್ವಲ್ಪಮಟ್ಟಿಗೆ ಚರ್ಚಾಸ್ಪದವಾಗಿದೆ.

Business of the House

Mr. DEPUTY SPEAKER.— This can be taken up tomorrw. I have announcement to make.

The Business Advisory Committee which met today at 3-30 P.M. decided that the Public Wakfs (Extension of Limitation) Karnataka Amendment Bill, 1976 be taken up for consideration on 14th April 1976 along with Non-official business, and the Karnataka Motor Vehicles (Amendment) Bill, 1976 be taken up for consideration on 15th April 1976 along with Non-official business. The House will adjourn on 15th April.

The House now stands adjourned to meet tomorrow at 1-00 P.M.

The House adjourned at Five Minutes past Six of the Clock to meet again at One of the Clock on Wednesday the 14th April 1976.